# ಸ್ತ್ರೀ ಸೇನಾನಿ



## ಸಕಾರಾತ್ಮಕ ಸೇನೆ

ಮೂರೂವರೆ ದಶಕಗಳ ಹಿಂದೆ ಎಚ್.ಎ.ಎಲ್.ಗೆ ಸೇರಿದ ನಾನು, ನನ್ನ ವೃತ್ತಿ ಜೀವನದ ಬಹಳಷ್ಟು ಸಮಯವನ್ನು ಭೂಸೇನೆ, ವಾಯುಸೇನೆ, ನೌಕಾಪಡೆ, ತಟರಕ್ಷದಳದ ಒಡನಾಟದಲ್ಲಿ ಕಳೆದಿರುವೆ.

ದಿಟವಾಗಿ ನೋಡಿದರೆ, ಸೇನೆ ಸರ್ಕಾರ ಬಿಂಬಿಸಿದಷ್ಟು ಪುರುಷ ಪೂರ್ವಾಗ್ರಹದ ಕ್ಷೇತ್ರವಲ್ಲ. ಭಾರತದ ಮೊಟ್ಟ ಮೊದಲ ದೇಶೀಯ ವಿನ್ಯಾಸದ ಧ್ರುವ ಹೆಲಿಕಾಪ್ಟರಿನ ಯೋಜನೆಯಲ್ಲಿ ಕೆಲಸ ಮಾಡಿದ ನನ್ನ ಉದ್ಯೋಗ ನನ್ನನ್ನು ಸದಾ ಸಶಸ್ತ್ರ ಸೇನೆಗಳ ನಿಕಟ ಸಂಪರ್ಕದಲ್ಲಿ ಇಟ್ಟಿತ್ತು. ಅಸ್ತ್ರ–ಶಸ್ತ್ರಗಳ ಆಯ್ಕೆಯ ತಂಡದ ತಾಂತ್ರಿಕ ಜವಾಬ್ದಾರಿ ಹೊತ್ತು ದೇಶ ವಿದೇಶಗಳಿಗೆ ಹೊರಟಾಗ, ನಮ್ಮ ತಂಡದಲ್ಲಿ ಭೂಸೇನೆ ಮತ್ತು ವಾಯುಪಡೆಯ ಉನ್ನತ ಅಧಿಕಾರಿಗಳಿದ್ದರು. ಅವರು ಯಾರೂ ಮಹಿಳೆ ಎಂಬ ಕಾರಣಕ್ಕೆ ನನ್ನ ನಿರ್ಣಯಗಳನ್ನು ತಳ್ಳಿ ಹಾಕಿರಲಿಲ್ಲ. ಅಷ್ಟೇ ಅಲ್ಲ, ಧ್ರುವ ಶಸ್ತ್ರೀಕರಣದ 'ಮಿಷನ್ ಸೆನ್ಸರ್ ಮತ್ತು ಆರ್ಮಮೆಂಟ್' ತಂಡಗಳಿಗೆ ಮುಖಂಡಳಾಗಿ ಹೆಲಿಕಾಪ್ಟರ್ ಶಸ್ತ್ರೀಕರಣದ ತಾಂತ್ರಿಕ ಜವಾಬ್ದಾರಿ ಹೊತ್ತಾಗ, ನನ್ನ ತಂಡದಲ್ಲಿ ಬಹು ಸಂಖ್ಯೆಯಲ್ಲಿ ಅತ್ಯಂತ ತಜ್ಞತೆಯ ಎಳೆಯ ವಯಸ್ಸಿನ ಮಹಿಳೆಯರಿದ್ದರು. ನೂರೆಂಟು ಮೀಟಿಂಗ್‌ಗಳಲ್ಲಿ ಮತ್ತು ಪರೀಕ್ಷಣಾ ಹಾರಾಟಗಳಲ್ಲಿ ಭೂಸೇನೆ, ವಾಯುಪಡೆ, ನೌಕಾಪಡೆ, ತಟರಕ್ಷಕ ದಳದೊಡನೆ ಅವರು ದುಡಿಯುವಾಗ, ವಯಸ್ಸಿನಲ್ಲಿ ಕಿರಿಯವರಾಗಿದ್ದರೂ, ಮಹಿಳೆಯರೆಂಬ ಕಾರಣಕ್ಕೆ ಅವರ ನಿರ್ಧಾರಗಳನ್ನು, ಮಾತುಗಳನ್ನು ತಳ್ಳಿ ಹಾಕಿದ ಪ್ರಸಂಗ ಒಮ್ಮೆ ಕೂಡಾ ಬಂದಿರಲಿಲ್ಲ.

ಉದ್ಯೋಗದ ಕಾರಣಕ್ಕೆ ಇಸ್ರೇಲ್, ಜರ್ಮನಿ, ಫ್ರಾನ್ಸ್, ಸ್ವೀಡನ್, ರಷ್ಯಾ ದೇಶಗಳಿಗೆ ಹೋದಾಗ, ಅಲ್ಲಿಯ ಸೇನಾಧಿಕಾರಿಗಳೊಡನೆ ಮಾತನಾಡುವಾಗ, ಮಹಿಳೆಯರಿಂದ ಆದೇಶ ತೆಗೆದುಕೊಳ್ಳುವುದು ಅವರಿಗೇನೂ ಅಪಮಾನದ್ದಾಗಿರಲಿಲ್ಲ ಎಂದು ತಿಳಿದುಬಂದಿತ್ತು. ಇಸ್ರೇಲಿನಲ್ಲಿ ಮಹಿಳೆಯರು ಕಡ್ಡಾಯವಾಗಿ ನಿಗದಿತ ಅವಧಿಯ ಮಿಲಿಟರಿ ಸೇವೆಯನ್ನು ಸಲ್ಲಿಸಬೇಕಿದೆ. ಅವರು ಕಾಂಬಾಟ್ ಪಾತ್ರದಲ್ಲಿಯೂ ಇದ್ದಾರೆ. 1986ರಲ್ಲಿಯೇ ಅಮಿರಾ ಡೋಟನ್, ಬ್ರಿಗೇಡಿಯರ್ ಜನರಲ್ ಸ್ಥಾನಕ್ಕೆ ಏರಿದ ಮೊಟ್ಟ ಮೊದಲ ಇಸ್ರೇಲಿ ಮಹಿಳೆಯಾದರು. ಹೀಗಿದ್ದೂ, ಮುಂದುವರೆದ ದೇಶಗಳ ಸೇನೆಯಲ್ಲಿಯೂ ಮಹಿಳೆ ಅಲ್ಪಸಂಖ್ಯಾತಳು. ಇಂತಹ ಸ್ಥಿತಿಗೆ ಕಾರಣ ಮಹಿಳೆಯ ಬೌದ್ಧಿಕ ಅಸಮರ್ಥತೆಯಲ್ಲ, ದೈಹಿಕ ದುರ್ಬಲತೆಯಲ್ಲ; ಸಮಾಜದ ಪೂರ್ವಾಗ್ರಹ ಮಹಿಳೆಯನ್ನು ಸೇನೆಯಿಂದ ದೂರವಿಡಲು ಪ್ರಯತ್ನಿಸುತ್ತಲೇ ಇರುತ್ತದೆ.

## ಯುದ್ಧರಂಗದಲ್ಲಿ ಮಹಿಳೆ

ಹಾಗೆ ನೋಡಿದರೆ, ಯುದ್ಧರಂಗಕ್ಕೆ ಮಹಿಳೆ ಹೊಸಬಳಲ್ಲ. ಪೌರುಷದ ಸಂಕೇತವಾಗಿ ದಂಡೆತ್ತಿ ಹೋಗದಿದ್ದರೂ, ದೇಶದ ರಕ್ಷಣೆಗೆ ಮುನ್ನುಗ್ಗಿದ ಮಹಿಳೆಯರು ಎಲ್ಲ ಕಾಲದಲ್ಲಿಯೂ ಇದ್ದರು.

ಕ್ರಿಸ್ತಶಕ ಒಂದರಲ್ಲಿಯೇ ಆಂಗ್ಲ ಮಹಿಳೆ ಬೂಡ್ಡಿ ಎಂಬಾಕೆ, ರೋಮನ್ನರು ದಾಳಿ ಇಟ್ಟು ಕಬಳಿಸಿನಿಂತ ತನ್ನ ರಾಜ್ಯದಲ್ಲಿ, ಅವರ ವಿರುದ್ಧ ಸೇನೆ ಕಟ್ಟಿ ಕಾಳಗಕ್ಕಿಳಿದಳು. ರೋಮನ್ನರ ದುರಾಡಳಿತ, ವಿಪರೀತದ ತೆರಿಗೆ ಜನರನ್ನು ಕಾಡುತ್ತಿದ್ದಾಗ, ದಂಡು ಕಟ್ಟಿ ಹೊರಟ ಈಕೆ ಯುದ್ಧದಲ್ಲಿ ಮಡಿದಳು.

ಹತ್ತನೇ ಶತಮಾನದಲ್ಲಿ ಮರ್ಸಿಯನ್ನರ ರಾಣಿಯಾಗಿ ಆಳಿದ ಏಥೆಲ್‌ಫೆಡ್, ಆಕ್ರಮಣ–ರಕ್ಷಣೆ ಎರಡರಲ್ಲೂ ನಿಪುಣಳಿದ್ದಳು. ಕ್ರಿಸ್ತಶಕ 910–915ರ ನಡುವೆ ಈಕೆ ಹತ್ತು ಕೋಟೆಗಳನ್ನು ನಿರ್ಮಿಸಿದ್ದಳು. ಹದಿನೈದನೇ ಶತಮಾನದಲ್ಲಿ ಫ್ರಾನ್ಸ್ ದೇಶದ ರೈತಾಪಿ ಹುಡುಗಿ ಜೋನ್ ಆಫ್ ಆರ್ಕ್ ಎಂದೇ ಪ್ರಸಿದ್ಧಳಾದವಳು, ಯುದ್ಧದ ಮುಖಂಡಳಾಗಿ ಮೇಲೇರಿದ್ದಳು. ಫ್ರಾನ್ಸ್ ದೇಶದ ಸಿಂಹಾಸನ ಆಂಗ್ಲರಿಗೆ ವಶವಾಗಕೂಡದೆಂದು ಹೋರಾಡಿದ್ದಳು.

1918ರಲ್ಲಿಯೇ 'ರಾಯಲ್ ಏರ್‌ಫೋರ್ಸ್'ನ ಮಹಿಳಾ ಪಡೆ ರೂಪುಗೊಂಡಿತ್ತು. 32 ಸಾವಿರ ಮಹಿಳೆಯರು ಈ ವಾಯುಸೇನೆಯಲ್ಲಿ ಸೇವೆ ಸಲ್ಲಿಸಿದ್ದರು. 1920ರಲ್ಲಿ ಮಹಿಳೆಯರಿಗೆ ಸೇನೆಯಲ್ಲಿ ಪ್ರವೇಶ ಕೂಡದು ಎಂಬ ನೀತಿ ತಂದು, ಈ ಪಡೆಯನ್ನು ತೆಗೆದು ಹಾಕಲಾಗಿತ್ತು. 1938ರ ಹೊತ್ತಿಗೆ ಎರಡನೇ ಮಹಾಯುದ್ಧದ ಮೋಡಗಳು ಕವಿದಾಗ, ಐರೋಪ್ಯ ದೇಶಗಳು ತಮ್ಮ ನೀತಿಯನ್ನು ಬದಲಿಸಿ, ಮಹಿಳೆಯರಿಗೆ ತಟ್ಟನೆ ಬಾಗಿಲು ತೆರೆದವು. ಅದಾಗ ವಾಯುಸೇನೆಯಲ್ಲಿ 2000 ಇದ್ದ ಮಹಿಳೆಯರ ಸಂಖ್ಯೆ 1943ರ ಹೊತ್ತಿಗೆ 1,82,000ಕ್ಕೆ ಏರಿತ್ತು! ಈ ಮಹಿಳಾ ಸೇನೆ ಬ್ರಿಟನ್ನಿನ ವಾಯುಸೇನೆಯ ಬಹುಮುಖ್ಯ ಭಾಗವಾಗಿತ್ತು. ಇವರಲ್ಲಿ ಅನೇಕರಿಗೆ ವೀರತನದ 'ಸೇನೆಯ ಪದಕ'ಗಳನ್ನು ಕೊಟ್ಟು ಗೌರವಿಸಿದ್ದರು.

ಎರಡನೇ ಮಹಾಯುದ್ಧದಲ್ಲಿ ಪುರುಷರ ಸಮಕ್ಕೆ ನಿಂತು ಹೋರಾಡಿದ ಮಹಿಳೆಯರಿದ್ದರು. ಕೇವಲ ಹವ್ಯಾಸಕ್ಕೆ ವಿಮಾನ ಹಾರಾಟವನ್ನು ಕಲಿತ ಮಹಿಳೆಯರು ಮಹಾಯುದ್ಧಗಳ ಭಾರೀ ನರಮೇಧದಲ್ಲಿ, ಪುರುಷ ಚಾಲಕರು ದೊಡ್ಡ ಸಂಖ್ಯೆಯಲ್ಲಿ ಮೃತರಾದಾಗ, ಯಾವುದೇ ಮಿಲಿಟರಿ ತರಬೇತಿಯಿಲ್ಲದೆ ಯುದ್ಧರಂಗಕ್ಕೆ ಧುಮುಕಿದರು.

ಸೋವಿಯತ್ ಒಕ್ಕೂಟದಲ್ಲಿ ಮಹಿಳೆಯರು ನೇರವಾಗಿ ಶತ್ರುಪಡೆಯೊಡನೆ ಹೋರಾಟದಲ್ಲಿ ಭಾಗವಹಿಸಿದರು. ಯುದ್ಧದ ಆರಂಭದಲ್ಲಿಯೇ 'ರೆಡ್ ಏರ್ ಫೋರ್ಸ್'ಗೆ ಸೇರಿದ ಲಿಡಿಯಾ ಲಿತ್ವಾಕ್ ಮತ್ತು ಏಕತೇರಿನ ಶಾತ್ರಾ ಬುದನೋವ ಎಂಬ ಇಬ್ಬರು ಮಹಿಳಾ ಬಾಂಬರ್ ವಿಮಾನ



ಸಿಯಾಚಿನ್ ಗ್ಲೇಸಿಯರ್‌ನಲ್ಲಿರುವ ಅತಿ ಎತ್ತರದ ವಾಯುಪಡೆಯ 'ಫ್ರಂಟ್‌ಲೈನ್ ಬೇಸ್'ನಲ್ಲಿ ಹೆಲಿಕಾಪ್ಟರ್ ಹಾರಿಸಿದ ಮೊದಲ ಚಾಲಕಿ ಸ್ಕ್ವಾಡ್ರನ್ ಲೀಡರ್ ಖುಷ್ಬೂ ಗುಪ್ತಾ